## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ : 300
ಸದಸ್ಯರ ಹೆಸರು : ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ : 12.07.2018
ಉತ್ತರಿಸುವ ಸಚಿವರು : ಮುಖ್ಯಮಂತ್ರಿ

*****

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸೌರಶಕ್ತಿ ವಿದ್ಯುತ್ ಮೇಲ್ಛಾವಣಿ (ಸೋಲಾರ್ ರೂಫ್ ಟಾಪ್) ಪ್ರೋತ್ಸಾಹಿಸಲು ಇಲಾಖೆ ಕೈಗೊಂಡಿರುವ ಕ್ರಮಗಳೇನು; ರಾಜ್ಯದಲ್ಲಿ ಎಷ್ಟು ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಲಾಗುತ್ತದೆ; (ಜಿಲ್ಲಾವಾರು ವಿವರ ನೀಡುವುದು) | ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ, ಸೌರಶಕ್ತಿ ಮೇಲ್ಛಾವಣಿ ಘಟಕ ಅಳವಡಿಸಲು ಈ ಕೆಳಕಂಡ ಪ್ರೋತ್ಸಾಹಕ ಕ್ರಮವನ್ನು ಕೈಗೊಳ್ಳಲಾಗಿರುತ್ತದೆ:<br>• ಸೌರ ಶಕ್ತಿ ಮೇಲ್ಛಾವಣಿ ಪಿವಿ ವ್ಯವಸ್ಥೆಗೆ ಸಂಬಂಧಿಸಿದ ಗ್ರಾಹಕರ/ಅಧಿಕಾರಿಗಳ ಕೈಪಿಡಿ, ಸರ್ಕಾರದ ಅಧಿಕೃತ ಜ್ಞಾಪನಾ ಪತ್ರಗಳು ಹಾಗೂ ಸುತ್ತೋಲೆಗಳನ್ನು ವಿದ್ಯುತ್ ಸರಬರಾಜು ಕಂಪನಿಗಳ ಅಂತರ್ಜಾಲದಲ್ಲಿ ಪ್ರಕಟಿಸಲಾಗಿದೆ.<br>• ವಾರ್ತಾ ಪತ್ರಿಕೆ, ನಿಯತ ಕಾಲಿಕೆಗಳು, ಸ್ಮರಣ ಸಂಚಿಕೆ, ಭಿತ್ತಿ ಪತ್ರಗಳು, ಕರಪತ್ರಗಳು, ಕೈಪಿಡಿಗಳು, ಕಾರ್ ಅಂಟು ಚೀಟಿಗಳು ಇತ್ಯಾದಿಗಳಲ್ಲಿ ಜಾಹೀರಾತುಗಳನ್ನು ನೀಡಲಾಗಿದೆ.<br>• ಫಲಕಗಳು ಮತ್ತು ಬಸ್ ತಂಗುದಾಣಗಳ ಮೇಲೆ ಜಾಹೀರಾತನ್ನು ನೀಡುವುದರ ಮುಖಾಂತರ ದೂರದರ್ಶನ, ಆಕಾಶವಾಣಿ, ಬಿಗ್ ಎಫ್.ಎಂಗಳಲ್ಲಿ ಆವರ್ತನಗಳನ್ನು ಸಹ ನೀಡಲಾಗಿದೆ<br>ಸಾರ್ವಜನಿಕರಿಗೆ/ವಿದ್ಯುತ್ ಗ್ರಾಹಕರಿಗೆ ಅರಿವು ಮೂಡಿಸುವ ಸಲುವಾಗಿ ಸೌರಶಕ್ತಿ ಮೇಲ್ಛಾವಣಿ ಘಟಕಗಳನ್ನು ಅಳವಡಿಸಲು ಇಚ್ಛೆಯುಳ್ಳ ಸಾರ್ವಜನಿಕರಿಗೆ/ವಿದ್ಯುತ್ ಗ್ರಾಹಕರಿಗೆ ಅನುಕೂಲವಾಗುವಂತೆ, ಗ್ರಾಹಕರು ಅನುಸರಿಸಬೇಕಾದ ಕಾರ್ಯವಿಧಾನಗಳ ಮಾರ್ಗಸೂಚಿ ಹಾಗೂ ಸಿದ್ಧ ವಿವಿಧ ಅರ್ಜಿ ನಮೂನೆಗಳನ್ನು ವಿದ್ಯುತ್ ಸರಬರಾಜು ಕಂಪನಿಗಳ ಅಂತರ್‌ಜಾಲದಲ್ಲಿ ಪ್ರಕಟಿಸಲಾಗಿದೆ.<br>ಕಳೆದ ಮೂರು ವರ್ಷಗಳಲ್ಲಿ ಸೌರಶಕ್ತಿ ಮೇಲ್ಛಾವಣಿ ಘಟಕಗಳಿಂದ ಉತ್ಪಾದಿಸಲಾದ ವಿದ್ಯುತ್ತಿನ, ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಆ) | ರಾಜ್ಯದಲ್ಲಿ ಸೌರಶಕ್ತಿ ಮುಖಾಂತರ ಎಷ್ಟು ವಿದ್ಯುತ್ ಉತ್ಪಾದನೆ ಮಾಡಲು ಗುರಿ ಇಟ್ಟುಕೊಳ್ಳಲಾಗಿದೆ ; ಪ್ರತಿ ಯೂನಿಟ್‌ಗೆ ಎಷ್ಟು ದರವನ್ನು ನಿಯಂತ್ರಣ ಆಯೋಗ ನಿಗದಿಪಡಿಸುತ್ತದೆ ; (ವಿವರ ನೀಡುವುದು) | ಕರ್ನಾಟಕ ಸರ್ಕಾರವು ಸೌರಶಕ್ತಿ ನೀತಿ 2014-21 ನ್ನು ದಿನಾಂಕ: 22-05-2014ರಂದು ಅಧಿಸೂಚಿಸಿದ್ದು, ನಿವ್ವಳ/ಒಟ್ಟು ಮಾಪಕ ಆಧಾರದ ಮೇಲೆ ಮೇಲ್ಛಾವಣಿ ಸೌರಶಕ್ತಿ ಅಡಿಯಲ್ಲಿ 400 ಮೆ.ವ್ಯಾನ್ನು 2018 ರೊಳಗೆ ಸಾಧಿಸಬೇಕೆಂದು ಗುರಿ ನಿಗದಿಪಡಿಸಲಾಗಿತ್ತು, ಪ್ರಸ್ತುತ, ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ ಇಎನ್ 49 ವಿಎಸ್‌ಸಿ 2016 ದಿನಾಂಕ: 12-01-2017 ರನ್ವಯ ನಿವ್ವಳ/ಒಟ್ಟು ಮಾಪಕ ಆಧಾರದ ಮೇಲೆ ಮೇಲ್ಛಾವಣಿ ಸೌರಶಕ್ತಿ ಅಡಿಯಲ್ಲಿ 2400 ಮೆ.ವ್ಯಾಟ್‌ನ ವಿದ್ಯುತ್ ಉತ್ಪಾದನೆಯನ್ನು 2021 ರೊಳಗೆ ಸಾಧಿಸಬೇಕಾಗಿ ಪರಿಷ್ಕೃತ ಗುರಿಯನ್ನು ನಿಗದಿಪಡಿಸಿರುತ್ತಾರೆ.<br>ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗದ ಆದೇಶ ಸಂಖ್ಯೆ: S/03/1 ದಿನಾಂಕ : 10-10-2013 ರಂತೆ, ದಿನಾಂಕ: 02-05-2016 ಕ್ಕಿಂತ ಮುಂಚೆ ವಿದ್ಯುತ್ ಖರೀದಿ ಒಪ್ಪಂದ ಕೈಗೊಂಡ ಸ್ಥಾವರಗಳಿಂದ ಉತ್ಪಾದಿಸುವ ವಿದ್ಯುತ್‌ನ ಪ್ರತಿ ಯೂನಿಟ್‌ಗೆ, ಕೇಂದ್ರ ಸರ್ಕಾರದ |

...2)

ಅನುದಾನ ಪಡೆಯದ ಸ್ಥಾವರಗಳಿಗೆ ರೂ. 9.56/- ರಂತೆ ಮತ್ತು ಅನುದಾನ ಪಡೆದಿಕೊಂಡಿರುವ ಸ್ಥಾವರಗಳಿಗೆ ಪ್ರತಿ ಯೂನಿಟ್‌ಗೆ ರೂ.7.20/- ರಂತೆ ಪಾವತಿಸಲಾಗುತ್ತಿದೆ.

ದಿನಾಂಕ: 02-05-2016ರ ನಂತರ ವಿದ್ಯುತ್ ಖರೀದಿ ಒಪ್ಪಂದ ಮಾಡಿಕೊಳ್ಳಲಾದ ಮೇಲ್ಛಾವಣಿ ಸೌರ ವಿದ್ಯುತ್ ಘಟಕಗಳಿಂದ ಈ ಕೆಳಕಂಡ ದರಗಳಲ್ಲಿ ವಿದ್ಯುತ್ ಖರೀದಿಸಲಾಗುತ್ತಿದೆ.

| ಸಾಮರ್ಥ್ಯ | ದರಗಳು ರೂ/ಯೂನಿಟ್‌ಗೆ (ಸಬ್ಸಿಡಿ ರಹಿತ ಸ್ಥಾವರಗಳಿಗೆ) | ದರಗಳು ರೂ/ಯೂನಿಟ್‌ಗೆ (ಸಬ್ಸಿಡಿ ಸಹಿತ ಸ್ಥಾವರಗಳಿಗೆ) |
|---|---|---|
| 1 – 10 ಕಿ.ವ್ಯಾ | 7.08 | 6.03 |
| 10 – 50 ಕಿ.ವ್ಯಾ | 6.61 | 5.63 |
| 50 – 100 ಕಿ.ವ್ಯಾ | 6.14 | 5.23 |
| 100 – 500 ಕಿ.ವ್ಯಾ | 5.67 | 4.83 |
| 500 – 1000 ಕಿ.ವ್ಯಾ | 5.20 | 4.43 |

ದಿನಾಂಕ: 15-09-2017 ರಂದು ಕೆಇಆರ್‌ಸಿಯಿಂದ ನೀಡಿರುವ ಜಕಾತಿ ಆದೇಶದಂತೆ ಬಹುಮಹಡಿಗಳ ಕಟ್ಟಡಗಳಲ್ಲಿ ಅಳವಡಿಸುವ ಒಂದಕ್ಕಿಂತ ಹೆಚ್ಚಿನ ಸಂಖ್ಯೆಯ ಸೌರಶಕ್ತಿ ಮೇಲ್ಛಾವಣಿ ಘಟಕಗಳಿಗೆ ಪ್ರತಿ ಯೂನಿಟ್‌ಗೆ APPC (Average Pooled Power Purchase Cost) ದರಗಳು ಅಥವಾ ರೂ.4.00/- ಇವುಗಳಲ್ಲಿ ಯಾವುದು ಕಡಿಮೆಯೋ ಆ ದರವನ್ನು ನಿಗದಿಪಡಿಸುವಂತೆ ಸೂಚಿಸಲಾಗಿರುತ್ತದೆ.

ಪ್ರಸ್ತುತ, ದಿನಾಂಕ: 18-05-2018 ರಂದು ಕೆ.ಇ.ಆರ್.ಸಿ.ಯಿಂದ ನೀಡಿರುವ ಆದೇಶದನ್ವಯ ದಿನಾಂಕ: 01-04-2018 ರಿಂದ ವಿದ್ಯುತ್ ಖರೀದಿ ಒಪ್ಪಂದ ಕೈಗೊಂಡು, ಚಾಲನೆಗೊಳ್ಳುವ ಸ್ಥಾವರಗಳಿಗೆ ಈ ಕೆಳಕಂಡಂತೆ ಪ್ರತಿ ಯೂನಿಟ್‌ಗೆ ದರಗಳನ್ನು ವಿಧಿಸಲಾಗಿರುತ್ತದೆ:

a. ಪ್ರತ್ಯೇಕ (Individual) ಸೌರಮೇಲ್ಛಾವಣಿ ಸ್ಥಾವರಗಳಿಗೆ ಈ ಕೆಳಕಂಡಂತೆ ದರಗಳನ್ನು ವಿಧಿಸಲಾಗಿರುತ್ತದೆ:
   i. ಸಬ್ಸಿಡಿ ಪಡೆಯುವ ಸ್ಥಾವರಗಳಿಗೆ:ರೂ.2.67/-
   ii. ಸಬ್ಸಿಡಿ ಪಡೆಯದ ಸ್ಥಾವರಗಳಿಗೆ: ರೂ.3.56/-
b. ಬಹುಮಹಡಿ ಕಟ್ಟಡಗಳಲ್ಲಿ ಅಳವಡಿಸುವ ಒಂದಕ್ಕಿಂತ ಹೆಚ್ಚಿನ ಸೌರಮೇಲ್ಛಾವಣಿ ಸ್ಥಾವರಗಳಿಗೆ ಈ ಕೆಳಕಂಡಂತೆ ದರಗಳನ್ನು ವಿಧಿಸಲಾಗಿರುತ್ತದೆ:
   i. ಸಬ್ಸಿಡಿ ಪಡೆಯುವ ಸ್ಥಾವರಗಳಿಗೆ ರೂ.2.403/-

ಸಬ್ಸಿಡಿ ಪಡೆಯದ ಸ್ಥಾವರಗಳಿಗೆ ರೂ.3.204/-

| | | |
|---|---|---|
| ಇ) | ಸೌರಶಕ್ತಿ ಮೇಲ್ಛಾವಣಿ ಘಟಕ ಪ್ರೋತ್ಸಾಹಿಸಲು ಬ್ಯಾಂಕ್ ಸಾಲವನ್ನು ನೀಡಲು ಇಲಾಖೆಯಿಂದ ನಿರ್ದೇಶನ ನೀಡಲಾಗಿದೆಯೇ ; (ವಿವರ ನೀಡುವುದು) | ಸೌರಶಕ್ತಿ ಮೇಲ್ಛಾವಣಿ ಘಟಕಗಳನ್ನು ವಸತಿ/ವಾಣಿಜ್ಯ/ಕೈಗಾರಿಕೆ ಮತ್ತು ಶೈಕ್ಷಣಿಕ ಸಂಸ್ಥೆಗಳ ಕಟ್ಟಡದ ಮೇಲ್ಛಾವಣಿಯಲ್ಲಿ ಅಳವಡಿಸಲು ಪ್ರೋತ್ಸಾಹಿಸುವ ಸಲುವಾಗಿ ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯ ವತಿಯಿಂದ ದಿನಾಂಕ 17-02-2016 ರಂದು ದಕ್ಷಿಣ ಕನ್ನಡ ಜಿಲ್ಲೆಯ ಮುಂಚೂಣಿ ಬ್ಯಾಂಕ್‌ಗಳ (Lead Bank) ಸಹಯೋಗದೊಂದಿಗೆ "ಮೆಗಾ ಸೋಲಾರ್ ಕ್ರೆಡಿಟ್ ಕ್ಯಾಂಪ್" ನ್ನು ಹಮ್ಮಿಕೊಂಡು ಗ್ರಾಹಕರಿಗೆ ಸೂಕ್ತ ಮಾಹಿತಿಯನ್ನು ನೀಡಲಾಗಿದ್ದು, ಇದಲ್ಲದೆ ಸದರಿ ಕ್ಯಾಂಪ್‌ನಲ್ಲಿ ಗ್ರಾಹಕರಿಗೆ ಸೌರ ಮೇಲ್ಛಾವಣಿ ಘಟಕ ಅಳವಡಿಸಲು ನೀಡಲಾಗುವ ಸಾಲದ ಕುರಿತಂತೆ ಬಡ್ಡಿದರದ ಬಗ್ಗೆ ಮಾಹಿತಿಯನ್ನು ಸಹ ಒದಗಿಸಿರುತ್ತಾರೆ. |

...3)

| | | |
|---|---|---|
| | | ಸೌರಶಕ್ತಿ ಮೇಲ್ಛಾವಣಿ ಘಟಕಗಳನ್ನು ಅಳವಡಿಸಿಕೊಳ್ಳಲು ಬ್ಯಾಂಕುಗಳಿಂದ ಸಾಲವನ್ನು ಪಡೆಯಲು, ಇತರೆ ವಿದ್ಯುತ್ ಸರಬರಾಜು ಕಂಪನಿಗಳಿಂದ ಯಾವುದೇ ನಿರ್ದೇಶನವಿರುವುದಿಲ್ಲ.<br>ಆದರೆ ಎಂ.ಎನ್.ಆರ್.ಇ. ವತಿಯಿಂದ ಗೃಹ ಸಾಲ/ಗೃಹ ನವೀಕರಣ ಸಾಲ ಪಡೆಯುವ ಗ್ರಾಹಕರಿಗೆ ಸೋಲಾರ್ ಮೇಲ್ಛಾವಣಿ ಘಟಕಗಳನ್ನು ಸ್ಥಾಪಿಸಲು ಪ್ರೋತ್ಸಾಹಿಸಿ ಅದಕ್ಕೆ ತಗಲುವ ವೆಚ್ಚವನ್ನು ಗೃಹ ಸಾಲದಡಿಯಲ್ಲಿ ಪಡೆಯಲು ಅವಕಾಶ ಕಲ್ಪಿಸಿಕೊಡಲು ಸಾರ್ವಜನಿಕ ವಲಯದ ಬ್ಯಾಂಕುಗಳಿಗೆ ದಿನಾಂಕ: 19.11.2014ರಂದು ನಿರ್ದೇಶನ ನೀಡಲಾಗಿರುತ್ತದೆ. |
| ಈ) | **ಸರ್ಕಾರಿ** ಕಟ್ಟಡಗಳಲ್ಲಿ ಮೇಲ್ಛಾವಣಿ **ಘಟಕ**ಗಳನ್ನು ಕಡ್ಡಾಯಗೊಳಿಸಲು **ಇಲಾಖೆ** ಕ್ರಮ ಕೈಗೊಂಡಿದೆಯೇ ; **ವಿಧಾನಸೌಧ** ಮತ್ತು ವಿಕಾಸ **ಸೌಧ**ಗಳಲ್ಲಿ ಸೌರಶಕ್ತಿ ಮೇಲ್ಛಾವಣಿ **ಘಟಕ** ಒದಗಿಸಲಾಗಿದೆಯೇ ? **(ವಿವರ ನೀಡುವುದು)** | ಸರ್ಕಾರಿ ಕಟ್ಟಡಗಳಲ್ಲಿ ಮೇಲ್ಛಾವಣಿ ಘಟಕಗಳನ್ನು ಕಡ್ಡಾಯಗೊಳಿಸಲು ಯಾವುದೇ ನಿರ್ದೇಶನವಿರುವುದಿಲ್ಲ, ಆದರೆ 13ನೇ ಹಣಕಾಸು ಆಯೋಗದ ಧನಸಹಾಯದೊಂದಿಗೆ, ಸರ್ಕಾರಿ ಶಾಲಾ ಕಾಲೇಜುಗಳು ಹಾಗೂ ಸರ್ಕಾರಿ ಕಟ್ಟಡಗಳ ಮೇಲೆ ಸೌರಶಕ್ತಿ ಘಟಕಗಳು ಅಳವಡಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.<br>ಕೇಂದ್ರ ಸರ್ಕಾರದ ಸಮಗ್ರ ಇಂಧನ ಅಭಿವೃದ್ಧಿ ಯೋಜನೆಯಡಿಯಲ್ಲಿ (IPDS) ಸರ್ಕಾರಿ ಕಛೇರಿಗಳು, ಸರ್ಕಾರದ ಅಧೀನ ನಿಗಮ ಮಂಡಳಿಗಳು, ಶಾಲಾ ಕಾಲೇಜು ಮತ್ತು ಆಸ್ಪತ್ರೆ ಕಟ್ಟಡಗಳ ಮೇಲ್ಛಾವಣಿಯಲ್ಲಿ ಘಟಕಗಳನ್ನು ಅಳವಡಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.<br>ವಿಕಾಸಸೌಧದ ಮೇಲ್ಛಾವಣಿಯ ಮೇಲೆ ಈಗಾಗಲೇ 100 ಕಿ.ವ್ಯಾ ಸಾಮರ್ಥ್ಯದ ಸೌರಶಕ್ತಿ ಮೇಲ್ಛಾವಣಿ ಘಟಕವನ್ನು ಅಳವಡಿಸಲಾಗಿದೆ.<br>ವಿಧಾನಸೌಧ, ಎಂ.ಎಸ್. ಬಿಲ್ಡಿಂಗ್ ಮತ್ತು ರಾಜಭವನ ಮೇಲ್ಛಾವಣಿಯ ಮೇಲೆ ಸೌರಶಕ್ತಿ ಘಟಕವನ್ನು, 13ನೇ ಹಣಕಾಸು ಆಯೋಗದ ಅನುದಾನದಲ್ಲಿ ಅಳವಡಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. |

ಸಂಖ್ಯೆ: ಇಎನ್ 122 ಇಬಿಎಸ್ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 300 ಕ್ಕೆ ಅನುಬಂಧ

ಕಳೆದ ಮೂರು ವರ್ಷಗಳಲ್ಲಿ ಗ್ರಾಹಕರು ತಮ್ಮ ಸ್ಥಾವರದಲ್ಲಿ ಅಳವಡಿಸಿರುವ ಸೌರ ಶಕ್ತಿ ಮೇಲ್ಛಾವಣಿ ಘಟಕಗಳಿಂದ ಉತ್ಪಾದಿಸಲಾದ ವಿದ್ಯುತ್ತಿನ ಜಿಲ್ಲಾವಾರು ವಿವರಗಳು ಕೆಳಕಂಡಂತಿವೆ.

| ಕ್ರಸಂ | ಜಿಲ್ಲೆ | 2015-16 | | 2016-17 | | 2017-18 | |
|---|---|---|---|---|---|---|---|
| | | ಸ್ಥಾಪಿತ ಸಾಮರ್ಥ್ಯ ಕಿ.ವ್ಯಾಪಿ ಗಳಲ್ಲಿ | ಉತ್ಪಾದಿಸಿದ ಅಂದಾಜು ವಿದ್ಯುತ್ ಪ್ರಮಾಣ (ಮಿಲಿಯನ್ ಯೂನಿಟ್‌ಗಳಲ್ಲಿ) | ಸ್ಥಾಪಿತ ಸಾಮರ್ಥ್ಯ ಕಿ.ವ್ಯಾಪಿ ಗಳಲ್ಲಿ | ಉತ್ಪಾದಿಸಿದ ಅಂದಾಜು ವಿದ್ಯುತ್ ಪ್ರಮಾಣ (ಮಿಲಿಯನ್ ಯೂನಿಟ್‌ಗಳಲ್ಲಿ) | ಸ್ಥಾಪಿತ ಸಾಮರ್ಥ್ಯ ಕಿ.ವ್ಯಾಪಿ ಗಳಲ್ಲಿ | ಉತ್ಪಾದಿಸಿದ ಅಂದಾಜು ವಿದ್ಯುತ್ ಪ್ರಮಾಣ (ಮಿಲಿಯನ್ ಯೂನಿಟ್‌ಗಳಲ್ಲಿ) |
| 1 | ಬೆಂಗಳೂರು ನಗರ | 4683.85 | 15.33 | 12743.82 | 26.21 | 17869.06 | 29.67 |
| 2 | ಬೆಂಗಳೂರು ಗ್ರಾಮಾಂತರ | 860.50 | 2.79 | 13750.60 | 20.19 | 16787.50 | 22.24 |
| 3 | ದಾವಣಗೆರೆ | 272.50 | 0.88 | 1500.50 | 2.54 | 2454.10 | 3.18 |
| 4 | ಚಿಕ್ಕಬಳ್ಳಾಪುರ | 648.50 | 2.10 | 2151.50 | 4.13 | 13151.50 | 11.56 |
| 5 | ತುಮಕೂರು | 115.00 | 0.37 | 5944.00 | 8.24 | 8061.00 | 9.67 |
| 6 | ಕೋಲಾರ | 1010.00 | 3.27 | 14844.00 | 21.95 | 24163.00 | 28.24 |
| 7 | ರಾಮನಗರ | 419.40 | 1.36 | 1679.40 | 3.06 | 2324.40 | 3.50 |
| 8 | ಚಿತ್ರದುರ್ಗ | 0.00 | 0.00 | 149.00 | 0.20 | 9174.00 | 6.29 |
| 9 | ದಕ್ಷಿಣ ಕನ್ನಡ | 647.53 | 0.0492 | 1702.01 | 0.2754 | 3641.12 | 0.1625 |
| 10 | ಉಡುಪಿ | 529.50 | 0.1016 | 1268.99 | 0.7176 | 2646.94 | 1.1534 |
| 11 | ಶಿವಮೊಗ್ಗ | 104.00 | 0.0222 | 882.5 | 0.6065 | 2378.3 | 2.3012 |
| 12 | ಚಿಕ್ಕಮಗಳೂರು | 12.00 | 0.0060 | 27.00 | 0.0102 | 567.00 | 0.2787 |
| 13 | ಕಲಬುರಗಿ | 210.00 | 0.1104 | 210.00 | 0.173 | 1455.00 | 0.486169 |
| 14 | ಯಾದಗಿರಿ | 0.00 | 0.00 | 990.00 | 0.366 | 990.00 | 0.096089 |
| 15 | ಬೀದರ್ | 0.00 | - 0.00 | 0.00 | 0.00 | 810.00 | 0.705885 |
| 16 | ರಾಯಚೂರು | 2.00 | 0.0069 | 625.00 | 0.109 | 2845.00 | 1.111556 |
| 17 | ಕೊಪ್ಪಳ | 0.00 | 0.00 | 15.00 | 0.0016 | 1695.00 | 1.442356 |
| 18 | ಬಳ್ಳಾರಿ | 3.00 | 0.056 | 529.517 | 0.054 | 2526.00 | 1.073691 |
| 19 | ಧಾರವಾಡ | 0.00 | 0.00 | 1184.00 | 0.90 | 1850.48 | 2.23 |
| 20 | ಗದಗ | 0.00 | 0.00 | 2400.00 | 1.42 | 2655.00 | 4.37 |
| 21 | ಹಾವೇರಿ | 0.00 | 0.00 | 414.00 | 0.28 | 609.00 | 0.84 |
| 22 | ಉತ್ತರ ಕನ್ನಡ | 0.00 | 0.00 | 348.00 | 0.30 | 485.19 | 0.52 |
| 23 | ಬೆಳಗಾವಿ | 0.00 | 0.00 | 2174.00 | 1.65 | 2609.04 | 4.29 |
| 24 | ವಿಜಯಪುರ | 0.00 | 0.00 | 2331.00 | 1.89 | 2356.00 | 4.88 |
| 25 | ಬಾಗಲಕೋಟೆ | 0.00 | 0.00 | 905.10 | 0.79 | 992.10 | 4.91 |
| 26 | ಮೈಸೂರು | 292.00 | 0.11 | 2625.00 | 2.49 | 4399.00 | 5.00 |
| 27 | ಚಾಮರಾಜನಗರ | 0.00 | 0.00 | 385.00 | 0.28 | 509.00 | 0.58 |
| 28 | ಕೊಡಗು | 0.00 | 0.00 | 120.00 | 0.09 | 379.00 | 0.20 |
| 29 | ಮಂಡ್ಯ | 115.00 | 0.02 | 2440.00 | 2.28 | 3467.00 | 3.60 |
| 30 | ಹಾಸನ | 40.00 | 0.03 | 605.00 | 0.49 | 1361.00 | 1.12 |
| | ಒಟ್ಟು | 9964.78 | 26.6123 | 74943.94 | 101.6933 | 135210.7 | 155.7015 |